# ವಚನ ಸಾಹಿತ್ಯದಲ್ಲಿ ಪರಂಪರೆ ಹಾಗೂ ಆಧುನಿಕ ಚಿಂತನೆಗಳು

ರಾಮರೆಡ್ಡಿ ಕೆ.

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಎಸ್.ವಿ.ಎಸ್., ಬೆಳ್ಳುಬ್ಬಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಬೆಳಗಾವಿ ಜಿಲ್ಲೆ.

DOI: https://doi.org/10.5281/zenodo.15795771

## ABSTRACT:

ಹನ್ನೆರಡನೆಯ ಶತಮಾನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಲಿಂಗತ್ವದ ನೆಲೆಯಲ್ಲಿ ಅಸಮಾನತೆಯನ್ನು ಜೀವಂತವಾಗಿಟ್ಟಿರುವಂತಹ ಕಾಲವಾಗಿತ್ತು. ಇಂತಹ ಕಾಲದಲ್ಲಿ ಬದುಕಿದ್ದ ಬಸವಣ್ಣ, ಅಲ್ಲಮಪ್ರಭು, ದೇವರ ದಾಸಿಮಯ್ಯ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ ಮುಂತಾದ ಶರಣರೆಲ್ಲರೂ ಜೀವಪರ, ಸಮಾನತೆಯ ಪರ ಕಾಳಜಿಯನ್ನು ಹೊಂದಿದ ಮಾನವತಾವಾದಿಗಳಾಗಿದ್ದರು. ಇವರೆಲ್ಲರೂ ಈ ಅಸಮಾನತೆಯ ವಿರುದ್ಧ ಪ್ರತಿಭಟಿಸಿದರು. ಶರಣರು ನಡೆ-ನುಡಿ, ಸಮಾನತೆ, ಕಾಯಕ, ದಾಸೋಹ, ವೈಚಾರಿಕತೆ, ವೈಜ್ಞಾನಿಕ ಚಿಂತನೆ, ಅಂತರಂಗ ಮತ್ತು ಬಹಿರಂಗ ಶುದ್ಧಿ, ಮೌಢ್ಯ ನಿವಾರಣೆ ಮುಂತಾದ ವಿಷಯಗಳನ್ನು ತಲಸ್ಪರ್ಶಿಯಾಗಿ ವಾಸ್ತವದ ನೆಲೆಯಲ್ಲಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಿದರು. ಇವರುಗಳು ಪರಂಪರೆ ಮತ್ತು ಆಧುನಿಕ ಚಿಂತನೆಯ ಪ್ರಜ್ಞೆಯನ್ನು ಹೊಂದಿದ್ದವರಾಗಿದ್ದರೆಂಬುದನ್ನು ಅವರ ವಚನಗಳಲ್ಲಿಯೇ ಕಾಣಬಹುದು.

## KEYWORDS:

ನಡೆ-ನುಡಿ, ಸಮಾನತೆ, ಕಾಯಕ, ದಾಸೋಹ, ವೈಚಾರಿಕತೆ, ವೈಜ್ಞಾನಿಕ ಚಿಂತನೆ.

ಪರಂಪರೆ ಎಂಬುದು ಹಿಂದಿನ ತಲೆಮಾರುಗಳಿಂದ ಪಡೆದ ಸಾಂಸ್ಕೃತಿಕ, ಐತಿಹಾಸಿಕ, ನೈಸರ್ಗಿಕ ಮತ್ತು ಅಮೂರ್ತ ಪರಂಪರೆಗಳ ಅಂಶಗಳನ್ನು ಒಳಗೊಂಡಿರುವಂತಹದ್ದು. ಪ್ರತಿಯೊಂದು ಸಮುದಾಯಗಳು ತಮ್ಮ ಸಾಂಸ್ಕೃತಿಕ ಗುರುತಿಗೆ ಪ್ರಮುಖವಾದ ಮೌಖಿಕ ಸಂಪ್ರದಾಯಗಳು, ಪ್ರದರ್ಶನ ಕಲೆಗಳು ಮತ್ತು ಸಾಂಪ್ರದಾಯಿಕ ಜ್ಞಾನದಂತಹ ಭೌತಿಕವಲ್ಲದ ಅಂಶಗಳನ್ನು ಒಳಗೊಂಡಿರುತ್ತವೆ. ಇವು ಸಮುದಾಯವು ಅಭಿವೃದ್ಧಿಪಡಿಸಿದ ಜೀವನ ವಿಧಾನಗಳ ಅಭಿವ್ಯಕ್ತಿಯಾಗಿ ಪೀಳಿಗೆಯಿಂದ ಪೀಳಿಗೆಗೆ ಮೌಲ್ಯಗಳನ್ನು ಒಳಗೊಂಡ ಜೀವನ ವಿಧಾನಗಳನ್ನು ಅಭಿವ್ಯಕ್ತಪಡಿಸುತ್ತ ಸಾಗುತ್ತಿರುತ್ತದೆ.

ಆಧುನಿಕತೆ ಎಂದರೆ ಸರಳವಾಗಿ ಹೇಳುವುದಾದರೆ ನಾವಿನ್ಯತೆ. ಪ್ರಾಚೀನ ಕಾಲದಿಂದಲೂ ಸಮಾಜಕ್ಕೆ ಮಾರಕವಾಗಿರುವ ಅಂಶಗಳನ್ನು ಕೈಬಿಟ್ಟು ಜೀವಪರ ಅಂಶಗಳನ್ನು ಅಳವಡಿಸಿಕೊಂಡು ಬದುಕುವುದೇ ಶ್ರೇಷ್ಠ ಜೀವನ, ಅದುವೇ ಆಧುನಿಕತೆ. ಪರಂಪರೆ ಮತ್ತು ಆಧುನಿಕತೆಗಳು ಸಹಜವಾಗಿ ಜೊತೆಯಾಗಿ ಸಾಗುತ್ತಿರುತ್ತವೆ. ಅದುವೇ ಸಮಾಜದ ಜೀವಾಳ. ಮನುಷ್ಯನ ಜೀವನದಲ್ಲಿ ಬೆಲೆ ಬಾಳುವಂತಹ ಆದರ್ಶಗಳು ಮತ್ತು ಮಾನವನ ಜೀವನಕ್ಕೆ ಮಹತ್ವವನ್ನು ತಂದುಕೊಡುವ ಅಂಶಗಳೇ ಮೌಲ್ಯಗಳು. ಇಂತಹ ಅಂಶಗಳನ್ನು ಹನ್ನೆರಡನೆಯ ಶತಮಾನದಲ್ಲಿ ಶರಣರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಾಧ್ಯವಾಗಿಸಿದರು. ಅವರು ರಚಿಸಿದ ವಚನಗಳೇ ಒಂದು ಮೌಲ್ಯವಾಗಿದೆ. ಜೀವನ ಸಿದ್ಧಾಂತವನ್ನು ಪ್ರತಿಪಾದಿಸುವ ವಚನ ಸಾಹಿತ್ಯ ಲೌಕಿಕ ಮತ್ತು ಪಾರಮಾರ್ಥಿಕಗಳನ್ನು ಬೆಸೆಯುವ ಮಹಾನುಭಾವಿಗಳ ಅಮೃತ ವಾಣಿಗಳಾಗಿವೆ. ಈ ಬಗೆಯ ಸಾಹಿತ್ಯ ಪ್ರಕಾರವು ಹನ್ನೆರಡನೆಯ ಶತಮಾನದಲ್ಲಿ ವಿಶೇಷ ಪ್ರಭಾವವನ್ನು ಬೀರಿ ಸುವರ್ಣ ಯುಗವನ್ನು ನಿರ್ಮಿಸಿತು. ಶರಣರ ಸ್ವಾನುಭವವೇ ವಚನಗಳ ಅಂತರಂಗವಾಗಿದ್ದು ಅದು ಲೌಕಿಕ ಮತ್ತು ಅಲೌಕಿಕಗಳನ್ನು ಒಂದು ಗೂಡಿಸುವ ಸೋಪಾನವಾಗಿದೆ.

**೧. ನಡೆ-ನುಡಿ:**

ಶರಣರು ನಡೆ-ನುಡಿಯನ್ನು ಏಕತ್ರವಾಗಿಸಿದವರು. 'ನುಡಿದಂತೆ ನಡೆ ಇದೇ ಜನ್ಮ ಕಡೆ'1 ಎಂದು ಹೇಳಿದ ಶರಣರು ನಡೆ ಮತ್ತು ನುಡಿಯನ್ನು ಭಿನ್ನವಾಗಿಸಿದವರಲ್ಲ.

**ಭಕ್ತರ ನಡೆ ಭಕ್ತರ ನುಡಿಯ ವಿಚಾರಿಸಿದಡೆ ಪ್ರಥಮ ಪಾತಕ**
**ಭಾಂಡ ಭಾಜನವ ಶುದ್ಧಿಯನರಸಿದಡೆ ಎರಡನೆಯ ಪಾತಕ**
**ಜಲಶುದ್ಧಿಯನರಸಿದಡೆ ಮೂರನೆಯ ಪಾತಕ**
**ವಾಕ್ ಶುದ್ಧಿಯನರಸಿದಡೆ ನಾಲ್ಕನೆಯ ಪಾತಕ**
**ಭಕ್ತನ ಹಸ್ತ ಮುಟ್ಟಲಾಗದೆಂದಡೆ ಐದನೆಯ ಪಾತಕ**
**ಇಂತಿ ಪಂಚ ಮಹಾಪಾತಕಕ್ಕೆ ಗುರಿಯಾದವರು ನಿಮ್ಮನೆತ್ತ**
**ಬಲ್ಲರಯ್ಯ2**

ಶರಣ ಉರಿಲಿಂಗಪೆದ್ದಿಯು ಈ ವಚನದಲ್ಲಿ ಭಕ್ತರಲ್ಲಿ ಭೇದವೆಣಿಸುತ್ತಿದ್ದ ವೈದಿಕರನ್ನು ಕಠೋರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾನೆ. ಮಾನವನ ಶುದ್ಧತನ ಮತ್ತು ಹೊಲೆತನ ಎನ್ನುವುದು ಅವನ ನಡೆ-ನುಡಿಯಲ್ಲಿಯೇ ಹೊರತು ಭಾಂಡ, ಜಲ, ವಾಕ್ ಮತ್ತು ಸ್ಪರ್ಶದಲ್ಲಿಲ್ಲವೆಂದು ಸಾರುತ್ತಾನೆ. ಪರಂಪರಾಗತವಾಗಿ ಜಾರಿಯಲ್ಲಿದ್ದ ಈ ಭಿನ್ನತೆಯನ್ನು ಪಂಚ ಮಹಾಪಾತಕಕ್ಕೆ ಗುರಿಯಾದವರು ಭಗವಂತನನ್ನು ಕಾಣಲು ಸಾಧ್ಯವಿಲ್ಲವೆಂದು ಕಠೋರವಾಗಿ ನುಡಿಯುತ್ತಾನೆ.

**೨. ಸಮಾನತೆ:**

ಮನುಷ್ಯನ ಹುಟ್ಟಿನ್ನೇ ಜಾತಿಯ ಅಸಮಾನತೆಯ ಮೂಲವಾಗಿಸಿಕೊಂಡ ಪುರೋಹಿತಶಾಹಿ ವರ್ಗ ಮತ್ತು ವೈದಿಕ ಪರಂಪರೆಯು ಸಮಾಜದಲ್ಲಿ ಅಸಮಾನತೆಯನ್ನು ನಿರಂತರವಾಗಿ ಜೀವಂತವಾಗಿರಿಸಿದೆ. ಜಾತಿಯನ್ನು ಹೋಗಲಾಡಿಸಲು ಬುದ್ಧನ ಕಾಲದಿಂದಲೂ ಖಂಡಿಸಿರುವ ಉದಾಹರಣೆಗಳು ಸಿಗುತ್ತವೆ. ಅಂತೆಯೇ ಪಂಪನು ತನ್ನ ಕಾವ್ಯದಲ್ಲಿ 'ಮಾನವ ಕುಲಂ ತಾನೊಂದೇ ವಲಂ' ಎನ್ನುವ ಮೂಲಕ ಮಾನವರೆಲ್ಲರೂ ಒಂದೇ ಎಂದಿದ್ದಾನೆ. ಇದೇ ಮಾತನ್ನು ವಚನಕಾರರೂ ಹೇಳುತ್ತಾರೆ.

**ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ**
**ಕರ್ಣದಲ್ಲಿ ಜನಿಸುವರುಂಟೇ? ಜಗದೊಳಗೆ!**
**ಲಿಂಗಸ್ಥಲವನರಿದವನೇ ಕುಲಜನು 3**

ಎಂದು ವೃತ್ತಿಯಲ್ಲಿ ಭಿನ್ನತೆ ಇದೆಯೇ ಹೊರತು ಜನ್ಮದಿಂದಲ್ಲವೆಂದರು. ಅವರವರ ವೃತ್ತಿಯನ್ನು ಆಧರಿಸಿ ಕಮ್ಮಾರ, ಮಡಿವಾಳ, ಅಕ್ಕಸಾಲಿಗ, ಹಾರುವ ಎಂದು ಕರೆಯುತ್ತೇವೆ. ಆದರೆ ಆ ವೃತ್ತಿಗಳೇ ಜಾತಿಗಳೆಂದಾಗಲಿ ಅಲ್ಲ. ಇನ್ನು ಕರ್ಣದಲ್ಲಿ ಜನಿಸುವುದಕ್ಕೆ ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ.

**೩. ಕಾಯಕ:**

'ವ್ಯಕ್ತಿಯ ಸ್ವಾವಲಂಬನೆ ಮತ್ತು ಸ್ವಾಭಿಮಾನದ ಸಂಕೇತವಾಗಿ ಮೂಡಿಬಂದ 'ಕಾಯಕ' ತತ್ವವೇ ವಚನಕಾರರ ಆರ್ಥಿಕ ಚಿಂತನೆಯ ಅಸ್ತಿಭಾರ'. ಮನುಷ್ಯ ತನ್ನ ಜೀವನ ಸಾಗಿಸಲು ಅವಲಂಬಿಸುವುದೇ ಕಾಯಕ. ಕಾಯಕವೆಂದರೆ ದೇಹವನ್ನು ನಿಗದಿತ ಅವಧಿಯವರೆಗೆ ದುಡಿಮೆಗಾಗಿ ಬಳಸಿಕೊಂಡು ಶ್ರಮದ ಮೂಲಕ ತನ್ನ ಆಹಾರವನ್ನು ಸಂಪಾದಿಸುವುದು. ಮೂಲತಃ ಸಂಸ್ಕೃತ ಶಬ್ದವಾದ 'ಕಾಯಕ' ಪದಕ್ಕೆ ಸಮಾನವಾಗಿ ಕಿಟೆಲ್ ಕೋಶದಲ್ಲಿ 'Relating to the body; performed with the body; Work; profession' ಎಂಬ ಅರ್ಥಗಳಿವೆ. ಹೀಗಾಗಿ 'ಕಾಯಕವೆಂದರೆ ಬರಿಯ ದುಡಿಮೆಯಲ್ಲ, ವ್ಯಕ್ತಿಯಲ್ಲ; ಅದೊಂದು ಸಂಕೀರ್ಣ ವ್ಯಾಪಕ ತತ್ವವಾಗಿ ಸಾಮಾಜಿಕ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಅನುಷ್ಠಾನಕ್ಕೆ ಬಂದ ಪ್ರಾಯೋಗಿಕ ಯೋಜನೆಯಾಗಿದೆ'. ಶರಣರು ಕಾಯಕದ ಮೂಲಕ ಎಲ್ಲರಲ್ಲೂ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಈ ಕಾಯಕವನ್ನು ಹಿಂದಿನ ಕಾಲದಿಂದ ಅವರವರ ವೃತ್ತಿಗಳ ಆಧಾರದ ಮೇಲೆ ಮೇಲು ಕೀಳೆಂದು ಭಾವಿಸಲಾಗುತ್ತಿತ್ತು. ಶರಣರು ಕಾಯಕವನ್ನು ಇಹ ಮತ್ತು ಪರದ ಸಾರ್ಥಕತೆಗಾಗಿ ರೂಪಿಸಿದರು. ಹೀಗಾಗಿ 'ಕಾಯಕವೇ

ಕೈಲಾಸ'ವೆಂದು ಕರೆದರು. ಆ ಮೂಲಕ ಕಾಯಕವನ್ನು ಉತ್ಕೃಷ್ಟವಾಗಿಸಿದರು. ಇದಕ್ಕಾಗಿ 'ಕಾಯಕದಿಂದ ಬಂದ ಕಾರ್ಯ ಸೊಪ್ಪಾದರೂ ಸರಿ ಲಿಂಗಕ್ಕರ್ಪಿತವೆಂದರು' ಶರಣರು. ಈಶಾವಾಶ್ಯೋಪನಿಷತ್ತಿನ ಶ್ಲೋಕವೊಂದರಲ್ಲಿ "ಈಶಾವಾಸ್ಯಮಿದಂ ಯತ್ಕಿಂಚ ಜಗತ್ಯಾಂಜಗತ್; ತೇನತ್ಯಕ್ತೇನ ಭುಂಜೀಥಾ ಮಾಗೃಧ: ಕಸ್ಯಸ್ವಿದ್ಧನಂ" 4 ಎಂದರೆ ಸಾಧಕನಾದವನು ಜೀವನ ಪೂರ್ತಿ ಒಂದಲ್ಲ ಒಂದು ಕೆಲಸ ಮಾಡುತ್ತಲೇ ಇರಬೇಕು. ಬೇರೆಯವರ ಶ್ರಮದಲ್ಲಿ ಬದುಕನ್ನು ನಡೆಸಬಾರದು ಎಂದು ಇದು ತಿಳಿಸುತ್ತದೆ. ಕಾಲಾನಂತರದಲ್ಲಿ ಈ ಪದ್ಧತಿಯನ್ನು ಬದಲಿಸಿ ದೈಹಿಕ ಶ್ರಮದ ಕೆಲಸಗಳಿಗೆ ಅಸ್ಪೃಶ್ಯತೆಯ ಕವಚ ತೊಡಿಸಿ ಅವರನ್ನು ಕೀಳಾಗಿ ಕಾಣಲಾಯಿತು. ಅಲ್ಲದೆ ಆ ಕೆಲಸಗಳಲ್ಲಿಯೂ ಮೇಲು ಕೀಳು ಎಂದು ವಿಭಾಗಿಸಿ ಪ್ರಾಣಿಗಿಂತಲೂ ಕೀಳಾಗಿ ನೋಡಲಾರಂಭಿಸಿದರು.

**ಆವ ಕಾಯಕವ ಮಾಡಿದರೂ ಒಂದೇ ಕಾಯಕವಯ್ಯಾ**
**ಆವ ವ್ರತವಾದಡೂ ಒಂದೇ ವ್ರತವಯ್ಯಾ**
**ಆಯ ತಪ್ಪಿದಡೆ ಸಾವಿಲ್ಲ ವ್ರತ ತಪ್ಪಿದಡೆ ಕೂಡಲಿಲ್ಲ**
**ಕಾಕ ಪಿಕದಂತೆ ಕೂಡಲು ನಾಯಕ ನರಕ ಗಂಗೇಶ್ವರ ಲಿಂಗದಲ್ಲಿ 5**

ಎಂದು ಹಾದರ ಕಾಯಕದ ಗಂಗಮ್ಮ ಕಾಯಕದಲ್ಲಿ ಭೇದ ಎಣಿಸಬಾರದು, ಯಾರು ಯಾವ ಕಾಯಕವನ್ನಾದರೂ ಅವಲಂಬಿಸಬಹುದು. ಪ್ರತಿಯೊಬ್ಬರ ಕಾಯಕವೂ ಶ್ರೇಷ್ಠವೇ ಎಂದಿದ್ದಾಳೆ.

**೪. ದಾಸೋಹ:**

ದಾಸೋಹ ಪರಿಕಲ್ಪನೆಯು ವಚನಕಾರರಿಂದ ಮುನ್ನೆಲೆಗೆ ಬಂದಿತು. ಶರಣರು ದಾಸೋಹದ ಪರಿಕಲ್ಪನೆಯನ್ನು ಆಚರಿಸುವ ತನಕ ಇದರ ಮಹತ್ವವು ಬಹುಶಃ ಬಹಳಷ್ಟು ಜನರಿಗೆ ಅರಿವಿಗೆ ಬಂದಿರಲಿಕ್ಕಿಲ್ಲ. 'ಸೃಷ್ಟಿಯ ನಿರಂತರ ಚಲನಶೀಲತೆಗೆ ಕೊಡುಕೊಳ್ಳುವಿಕೆಯು ಸಹಾಯಕವಾಗಿದೆ. ಸಮಾಜದ ಬೆಳವಣಿಗೆಯಲ್ಲಿ ವಸ್ತುವಿನ ಸ್ವೀಕೃತದಷ್ಟೇ ಕೊಡುವಿಕೆಯೂ ಪ್ರಮುಖವಾಗಿದೆ. ಸ್ವಾರ್ಥ ಮೂಲವಾದ ನಾನು, ನನ್ನದು ಎಂಬ ಲಾಭಜನ್ಯ ಮನೋಭಾವವನ್ನು ತೊಡೆದು ಹಾಕಿ, ಪ್ರಕೃತಿಯಲ್ಲಿನ ಗಿಡ, ಮರ, ಬಳ್ಳಿಗಳ ಅರ್ಪಣಾ ಭಾವ ಮೊದಲಾಗಿ ಮಾನವನ ಮನಸ್ಸು ತನಗಾಗಿಯೇ ಜಗತ್ತು ಎಂಬ ಉದಾರತೆಯಿಂದಾಗಿ ಸಾಮಾಜಿಕ ಜೀವನದಲ್ಲಿ ಗಟ್ಟಿಗೊಂಡ ಜಡತ್ವವನ್ನು ದೂರ ತಳ್ಳಿ ಪ್ರಕೃತಿಜನ್ಯ ಜೈವಿಕಾಂಶಗಳ ಸಮಾನತೆಯ ನೆಲೆಯಲ್ಲಿ 'ದಾಸೋಹ'ದಂತಹ ಮೌಲ್ಯವನ್ನು ಜಾರಿಗೆ ತಂದು ಸಾಮಾಜಿಕ ಸಮಾನತೆಗೆ ಕಾರಣರಾದರು'. ಈ ದಾಸೋಹದ ಮೂಲಕ ಮನುಷ್ಯನಲ್ಲಿನ ಅಹಂ ಭಾವವನ್ನು ತೊರೆಯುವ ಮತ್ತು ಸಮಾಜದಲ್ಲಿ ಕೆಲವರಿಗೆ ಸಹಾಯಕವೂ ಹಾಗೂ ಇನ್ನೂ ಕೆಲವೆಡೆ ಸಾಮಾಜಿಕ ಕೊಡುಗೆಯೂ ಆಗಿ ಒಂದು ಮೌಲ್ಯವಾಗಿ ನಿತ್ಯದ

ಬದುಕಿನಲ್ಲಿ ಶರಣರು ಕಾರ್ಯತತ್ಪರರಾದರು. ಇದರಿಂದ ಎಲ್ಲರಲ್ಲಿಯೂ ಸಮಾನತೆಯಷ್ಟೇ ಅಲ್ಲ ಮನುಷ್ಯತ್ವದ ಉತ್ತುಂಗತೆಯ ನಿಲುವನ್ನು ಕಾಣಲು ಸಾಧ್ಯವಾಯಿತು.

**ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು**
**ದಾಸೋಹವ ಮಾಡಬಹುದೇ?**
**ಒಮ್ಮನವ ತಂದು ಒಮ್ಮನದಲ್ಲಿಯೇ ಮಾಡಿ**
**ಇಮ್ಮನವಾಗದ ಮುನ್ನವೆ**
**ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ**
**ಸಲ್ಲಬೇಕು ಮಾರಯ್ಯ 6**

ಅಂದರೆ ಭಕ್ತರು ಪ್ರಾಮಾಣಿಕವಾಗಿ ದುಡಿದ ಆದಾಯದ ಭಾಗದ ಶೇಕಡಾ ೨೫ರಷ್ಟನ್ನು ದಾಸೋಹಕ್ಕೆ ಕೊಡಬೇಕು. ಇಲ್ಲಿ ಅಪ್ರಾಮಾಣಿಕವಾಗಿ ಬಂದ ಸಂಪತ್ತನ್ನು ದಾಸೋಹಕ್ಕೆ ಸಲ್ಲಿಸುವಂತಿಲ್ಲ. 'ದಾಸೋಹ' ಮಾಡುವವರು ಪರಿಶುದ್ಧ ಮನಸ್ಸನ್ನು ಹೊಂದಿದವರಾಗಿರಬೇಕು. ಹೀಗೆ ದಾಸೋಹ ಮಾಡುವಾಗ ಒಂದೇ ಮನಸ್ಸಿನಿಂದ ಮಾಡಬೇಕು. ಮನಸ್ಸಿನಲ್ಲಿ ಭೇದವುಂಟಾದರೆ ಆ ದಾಸೋಹವು ದೇವನಿಗೆ ಅರ್ಪಿತವಾಗಲಾರದೆಂದು ಆಯ್ದಕ್ಕಿ ಲಕ್ಕಮ್ಮ ನುಡಿಯುತ್ತಾಳೆ.

**೫. ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆ:**

ವಚನಕಾರರು ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿ ಆಲೋಚಿಸಿದವರು.

**ಕಲ್ಲದೇವರ ಪೂಜೆಯ ಮಾಡಿ,**
**ಕಲಿಯುಗದ ಕತ್ತೆಗಳಾಗಿ ಹುಟ್ಟಿದರು.**
**ಮಣ್ಣದೇವರ ಪೂಜಿಸಿ ಮಾನಹೀನರಾದರು.**
**ಮರದ ದೇವರೆಂದು ಪೂಜಿಸಿ ಮಣ್ಣು ಕೂಡಿದರು.**
**ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು,**
**ಜಗದ್ಭರಿತವಾದ ಪರಶಿವನೊಳಗೆ ಕಿಂಕರನಾದ**
**ಶಿವಭಕ್ತನೆ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ 7**

ಎಂದು ಅಂಬಿಗರ ಚೌಡಯ್ಯ ಟೀಕಿಸುತ್ತಾರೆ. ಪರಂಪರೆಯಿಂದ ಬಂದಿರುವ ಕಲ್ಲ, ಮಣ್ಣು, ಮರದ ದೇವರುಗಳನ್ನು ಪೂಜಿಸಿ ಜಡತ್ವ ಹೊಂದಿದುದನ್ನು ಖಂಡಿಸುತ್ತಾನೆ. ಏಕೆಂದರೆ ಇವೆಲ್ಲವುಗಳ ಮೂಲಕ ಸಮಾಜದಲ್ಲಿ ಮೇಲು ಕೀಳುಗಳನ್ನು ಸೃಷ್ಟಿಸಿ, ಸ್ಪೃಶ್ಯ-ಅಸ್ಪೃಶ್ಯತೆಯನ್ನು ಜಾರಿಗೆ ತಂದು ಶೋಷಣೆಗೊಳಪಡಿಸಿದ್ದನ್ನು ವಿರೋಧಿಸುತ್ತಾನೆ. ಇಂದಿಗೂ ಕೂಡ ದೇವರನ್ನು ಮುಟ್ಟಿ ಪೂಜಿಸುವ ಅವಕಾಶವನ್ನು ನೀಡದ ವಾತಾವರಣವನ್ನು ಕಾಣುತ್ತಿದ್ದೇವೆ. ಅದರ ಬದಲಾಗಿ ದೇವರ ಸ್ವರೂಪವೆಂದು ಭಾವಿಸಿದ ಇಷ್ಟಲಿಂಗ ಧರಿಸುವ ಮೂಲಕ

ದೇವರ ಸಾಮಿಪ್ಯವನ್ನು ತಲುಪಿದ ಶ್ರೇಯಸ್ಸು ಶರಣರದು. ಹೀಗಾಗಿ ಇಷ್ಟಲಿಂಗವೆಂಬುದು ಚಲನಶೀಲವಾದ ಗುಣವನ್ನು ಹೊಂದಿರುವಂತಹದ್ದು. ಇಂತಹುದೇ ನಿಲುವನ್ನು ಬಸವಣ್ಣನವರು ವ್ಯಕ್ತಪಡಿಸುತ್ತಾರೆ. "ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ, ನಮ್ಮ ಶರಣರ ಉರಿಗೆ ಅರಗಾಗಿ ಕರಗದನ್ನಕ್ಕ ಸ್ಥಾವರ ಜಂಗಮವೊಂದೇ ಎಂದು ನಂಬದನ್ನಕ್ಕ" 8 ಎಂಬ ಮಾತು ಅಂಬಿಗರ ಚೌಡಯ್ಯನವರ ವಿಚಾರಕ್ಕೆ ಪುಷ್ಟಿ ನೀಡುತ್ತಿದೆ. ಅಂದರೆ ಓದಿನ ಮಾತಾಗಿ ಉಳಿಯುವ ಜ್ಞಾನವು ವಾಸ್ತವದ ಬದುಕಿನಲ್ಲಿ ಪ್ರಯೋಜನಕ್ಕೆ ಬಾರದಿದ್ದರೆ ಆ ಓದು ಬರೀ ಜಡತ್ವವನ್ನು ಹೊಂದಬಲ್ಲದು ಎನ್ನುತ್ತಾನೆ ಬಸವಣ್ಣ. ಹೀಗೆ ವೈಚಾರಿಕ ಮತ್ತು ವೈಜ್ಞಾನಿಕವಾಗಿ ಚಿಂತಿಸುವ ಶರಣರ ವಿಚಾರದಲ್ಲಿ ಆಧುನಿಕತೆಯ ಅಂಶಗಳು ಢಾಳಾಗಿ ಕಾಣಿಸಿವೆ.

ಹೀಗೆ ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಪಾರಂಪರಿಕ ವಿವೇಕವನ್ನು ಅರ್ಥೈಸಿಕೊಂಡೇ ತಮ್ಮದೇ ವಚನ ಪರಿಭಾಷೆಯಲ್ಲಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ತಮಗೆ ಸರಿ ಕಾಣದ್ದನ್ನು, ಅಮಾನವೀಯವಾದದ್ದನ್ನು, ಸಮಾಜ ವಿರೋಧಿ ವಿಚಾರಗಳನ್ನು ಕಠೋರವಾಗಿ ವಿಮರ್ಶಿಸುವ ಮೂಲಕ ನಿರಾಕರಿಸಿದ್ದಾರೆ. ಆ ನಿರಾಕರಣೆ ಸಮಾಜಕ್ಕೆ ಮಾರಕವಾದುದು ಎಂಬ ವಿಚಾರದಿಂದಲೇ ನಿರಾಕರಿಸಿದ್ದು. ಇಷ್ಟಾಗಿಯೂ ಅವರೆಂದೂ ನಾನು ಮಾಡಿದ್ದೇನೆ ಎಂದು ಅಹಂಕಾರದಿಂದ ಮಾತನಾಡುವದಿಲ್ಲ. ಅವರೇ ಒಂದೆಡೆ "ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿ ಕಾಡಿತ್ತು ಶಿವನ ಡಂಗುರ" 9 ಎನ್ನುವ ಮೂಲಕ ತಮ್ಮೊಳಗೆ ಎಚ್ಚರಿಕೆಯನ್ನು ಸದಾ ಜಾಗೃತವಾಗಿಟ್ಟುಕೊಂಡೇ ಬದುಕಿದವರು. ಸಮಾಜದಲ್ಲಿ ಬೇರೂರಿದ್ದ ಅಸಂಖ್ಯ ವಿವಿಧ ರೋಗಕ್ಕೆ ಮದ್ದನ್ನು ನಡೆ-ನುಡಿಯ ಮೂಲಕ, ಎಲ್ಲರಲ್ಲಿ ಒಂದಾಗುವ ಮೂಲಕ ಹೊಸ ಸಮಾಜವನ್ನು ಕಟ್ಟಲು ಎಲ್ಲ ವಚನಕಾರರು ತಮ್ಮ ಇಡೀ ಬದುಕನ್ನೇ ಮುಡಿಪಾಗಿಟ್ಟು ಪ್ರಯತ್ನಿಸಿದವರು. ಅವರ ನಂತರದ ಎಂಟು ನೂರು ವರ್ಷಗಳ ನಂತರವೂ ನಾವುಗಳು ಅವರ ಧ್ಯೇಯ-ಧೋರಣೆಗಳನ್ನು ಇಂದಿಗೂ ವಾಸ್ತವದ ಜಗತ್ತಿನಲ್ಲಿ ಸಾಧ್ಯವಾಗಿಸಲು ಸಾಧ್ಯವಾಗುತ್ತಿಲ್ಲ. ಡಾ. ರಂಜಾನ್ ದರ್ಗಾವರು ಹೇಳುವಂತೆ 'ಮುಂದಿನ ಐವತ್ತರಿಂದ ನೂರು ವರ್ಷಗಳ ನಂತರ ಈ ಭೂಮಿಯ ಮೇಲೆ ಉಳಿಯುವ ಧರ್ಮವೆಂದರೆ ಅದು ಶರಣ ಧರ್ಮವೇ ಹೊರತು ಮತ್ತ್ಯಾವುದೂ ಅಲ್ಲವೆಂಬ ಮಾತು' ಶರಣರ ಚಿಂತನೆಯ ದ್ಯೋತಕವಾಗಿದೆ. ಶರಣರು ಕನಸಿದ ಸಮಾಜ ರೂಪುಗೊಳ್ಳಲೆಂಬ ಆಶಯ ಸಾಧ್ಯವಾಗಲೆಂದು ಆಶಿಸೋಣ.

## ಕೊನೆಯ ಟಿಪ್ಪಣಿಗಳು:

1. ಕಲಬುರ್ಗಿ ಎಂ.ಎಂ., (೨೦೧೬), ಬಸವ ಯುಗದ ವಚನ ಮಹಾಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. ೨೫೦
2. ಮಲ್ಲೆದೇವರು ಎಚ್.ಪಿ. (ಸಂ), (೧೯೭೫), ಉರಿಲಿಂಗಪೆದ್ದಿಗಳ ವಚನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. ೪೧
3. ಶಿವಾಜಿ ಜ್ಯೋತಿ, (೨೦೧೧), ಕಾಯಕ ಜೀವಿಗಳ ಸಾಮಾಜಿಕ ಚಿಂತನೆ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು.ಸಂ. 136
4. ಅದೇ, ಪು.ಸಂ. ೧೪೨
5. ಕಲಬುರ್ಗಿ ಎಂ.ಎಂ., (೨೦೧೬), ಬಸವ ಯುಗದ ವಚನ ಮಹಾಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. ೮೫೦
6. ಅದೇ, ಪು.ಸಂ. ೮೬೮
7. ಶಿವಾಜಿ ಜ್ಯೋತಿ, (೨೦೧೧), ಕಾಯಕ ಜೀವಿಗಳ ಸಾಮಾಜಿಕ ಚಿಂತನೆ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು.ಸಂ. ೧೪೯
8. ಕಲಬುರ್ಗಿ ಎಂ.ಎಂ., (೨೦೧೬), ಬಸವ ಯುಗದ ವಚನ ಮಹಾಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. ೮೬೭
9. ಅದೇ, ಪು.ಸಂ. ೯೫೩

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ., (೨೦೧೬), ಬಸವ ಯುಗದ ವಚನ ಮಹಾಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಪ್ರಸನ್ನಕುಮಾರ್ ಎಂ., (೨೦೨೧), ನಡುಗನ್ನಡ ಸಾಹಿತ್ಯದ ಪ್ರಕಾರಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಮಲ್ಲೇದೇವರು ಎಚ್.ಪಿ. (ಸಂ), (೧೯೭೫), ಉರಿಲಿಂಗಪೆದ್ದಿಗಳ ವಚನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಶಿವಾಜಿ ಜ್ಯೋತಿ, (೨೦೧೧), ಕಾಯಕ ಜೀವಿಗಳ ಸಾಮಾಜಿಕ ಚಿಂತನೆ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
5. ಹೂಗಾರ ಎಂ.ಬಿ., (೨೦೨೨), ವಚನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.